# All India Radio: Bangalore
# National Bulletin In Kannada
# 19.06.2025 / 1.10 pm

ಆಕಾಶವಾಣಿ, ಬೆಂಗಳೂರು

ರಾಷ್ಟ್ರೀಯ ವಾರ್ತೆಗಳು

**19.06.2025 / 1.10 pm**

**<><*<><>*><>**

ಮುಖ್ಯಾಂಶಗಳು

೧. ನಾಲ್ಕು ತಿಳುವಳಿಕಾ ಒಪ್ಪಂದಗಳಿಗೆ ಭಾರತ-ಕ್ರೊಯೇಷಿಯಾ ಸಹಿ

೨. ಇರಾನ್-ಇಸ್ರೇಲ್ ಬಿಕ್ಕಟ್ಟು: ಇರಾನ್‌ನಿಂದ ಭಾರತೀಯರನ್ನು ಹೊತ್ತ ಮತ್ತೊಂದು ವಿಮಾನ ಇಂದು ಭಾರತಕ್ಕೆ

೩. ನಾಲ್ಕು ರಾಜ್ಯಗಳ ಐದು ವಿಧಾನಸಭಾ ಸ್ಥಾನಗಳಿಗೆ ಉಪ ಚುನಾವಣೆ; ಮತದಾನ ಪ್ರಗತಿಯಲ್ಲಿ

೪. ಕ್ಯೂಎಸ್ ಜಾಗತಿಕ ವಿಶ್ವವಿದ್ಯಾಲಯ ರ‍್ಯಾಂಕಿಂಗ್: ದೇಶದ ಅಗ್ರ ಶ್ರೇಯಾಂಕಿತ ಸಂಸ್ಥೆಯಾಗಿ ಹೊರಹೊಮ್ಮಿದ ಐಐಟಿ ದೆಹಲಿ

><><><><><><><><

ಪ್ರಧಾನಿ ನರೇಂದ್ರ ಮೋದಿ ಅವರು ಕ್ರೊಯೇಷಿಯಾಕ್ಕೆ ತಮ್ಮ ಐತಿಹಾಸಿಕ ಮತ್ತು ಮೊದಲ ಅಧಿಕೃತ ಭೇಟಿಯನ್ನು ಸಂಪನ್ನಗೊಳಿಸಿದ್ದು, ನವದೆಹಲಿಗೆ ಮರಳುತ್ತಿದ್ದಾರೆ. ಉನ್ನತ ಮಟ್ಟದ ಮಾತುಕತೆಗಳಿಂದ ತುಂಬಿದ್ದ ಈ ಭೇಟಿಯು, ಭಾರತ-ಕ್ರೊಯೇಷಿಯಾ ಸಂಬಂಧಗಳಲ್ಲಿ ಗಮನಾರ್ಹ ಉನ್ನತಿಯನ್ನು ಗುರುತಿಸಿತು ಮತ್ತು ಭವಿಷ್ಯದ ಕಾರ್ಯತಂತ್ರದ ಸಹಯೋಗಗಳಿಗೆ ವೇದಿಕೆಯನ್ನು ಸಿದ್ಧಪಡಿಸಿತು. ಭಾರತ ಮತ್ತು ಕ್ರೊಯೇಷಿಯಾ ನಡುವಿನ ಸಂಬಂಧಗಳನ್ನು ಬಲಪಡಿಸುವ ಪ್ರಮುಖ ಹೆಜ್ಜೆಯಾಗಿ, ಎರಡೂ ರಾಷ್ಟ್ರಗಳ ನಡುವೆ ನಾಲ್ಕು ತಿಳುವಳಿಕಾ ಒಪ್ಪಂದಗಳಿಗೆ ಸಹಿ ಹಾಕಲಾಗಿದೆ. ಮೊದಲ ಒಪ್ಪಂದದಡಿ ಕೃಷಿ ಮತ್ತು ಮಿತ್ರ ವಲಯಗಳಲ್ಲಿ ಸಹಕಾರಕ್ಕಾಗಿ ಸಹಿ ಹಾಕಲಾಗಿದೆ. ಎರಡನೇ ಒಪ್ಪಂದದಡಿ ೨೦೨೬-೨೦೩೦ರ ಅವಧಿಗೆ ಸಾಂಸ್ಕೃತಿಕ ವಿನಿಮಯ ಕಾರ್ಯಕ್ರಮಕ್ಕಾಗಿ ಸಹಿ ಹಾಕಲಾಗಿದೆ. ಮೂರನೆಯದು ೨೦೨೫-೨೦೨೮ ರ ಅವಧಿಗೆ ಎರಡೂ ದೇಶಗಳ ಸಂಬಂಧಿತ ಸಚಿವಾಲಯಗಳ ನಡುವಿನ ವಿಜ್ಞಾನ ಮತ್ತು ತಂತ್ರಜ್ಞಾನ ಕ್ಷೇತ್ರದಲ್ಲಿ ಸಹಕಾರ ಕಾರ್ಯಕ್ರಮವಾಗಿದೆ. ಜಾಗ್ರೆಬ್ ವಿಶ್ವವಿದ್ಯಾಲಯದಲ್ಲಿ ಹಿಂದಿ ಪೀಠವನ್ನು ಸ್ಥಾಪಿಸುವ ಬಗ್ಗೆ ನಾಲ್ಕನೇ ಒಪ್ಪಂದವಾಗಿದೆ. ಇದಕ್ಕೂ ಮುನ್ನ ಪ್ರಧಾನಿ ಮೋದಿ ಮತ್ತು ಕ್ರೊಯೇಷಿಯಾದ ಪ್ರಧಾನಿ ಆಂಡ್ರೆಜ್ ಪ್ಲೆಂಕೋವಿಕ್, ಜಾಗ್ರೆಬ್‌ನಲ್ಲಿ ನಿಯೋಗ ಮಟ್ಟದ ಮಾತುಕತೆ ನಡೆಸಿದರು. ದ್ವಿಪಕ್ಷೀಯ ವ್ಯಾಪಾರವನ್ನು ವಿಸ್ತರಿಸಲು ಮತ್ತು ವಿಶ್ವಾಸಾರ್ಹ ಪೂರೈಕೆ ಸರಪಳಿಗಳನ್ನು ನಿರ್ಮಿಸಲು ಉಭಯ ನಾಯಕರು ಒಪ್ಪಿಕೊಂಡರು. ಔಷಧಗಳು, ಕೃಷಿ, ಮಾಹಿತಿ ತಂತ್ರಜ್ಞಾನ, ಸ್ವಚ್ಛ ಮತ್ತು ಡಿಜಿಟಲ್ ತಂತ್ರಜ್ಞಾನ, ನವೀಕರಿಸಬಹುದಾದ ಇಂಧನ, ಅರೆವಾಹಕಗಳು ಸೇರಿದಂತೆ ಹಲವಾರು ವರ್ಧಿತ ಸಹಕಾರ

ಕ್ಷೇತ್ರಗಳಲ್ಲಿ ಹಾಗೂ ಹಡಗು ನಿರ್ಮಾಣ ಮತ್ತು ಸೈಬರ್ ಭದ್ರತೆಯಲ್ಲಿ ಉಭಯ ದೇಶಗಳ ನಡುವೆ ಸಹಕಾರ ಮತ್ತಷ್ಟು ಬಲಪಡಿಸಲಾಗುವುದು ಎಂದು ಪ್ರಧಾನಿ ಮೋದಿ ಹೇಳಿದರು. ರಕ್ಷಣಾ ವಲಯದಲ್ಲಿ, ಎರಡೂ ರಾಷ್ಟ್ರಗಳು ಜಂಟಿ ತರಬೇತಿ, ಮಿಲಿಟರಿ ವಿನಿಮಯ ಮತ್ತು ರಕ್ಷಣಾ ಉದ್ಯಮ ಸಹಯೋಗವನ್ನು ಒಳಗೊಂಡ ದೀರ್ಘಾವಧಿಯ ರಕ್ಷಣಾ ಸಹಕಾರ ಯೋಜನೆಯನ್ನು ರೂಪಿಸಲಿವೆ ಎಂದು ಪ್ರಧಾನಿ ನರೇಂದ್ರ ಮೋದಿ ಪ್ರತಿಪಾದಿಸಿದರು.

><><><><><><><

ಇರಾನ್‌ನಿಂದ ಭಾರತೀಯ ಪ್ರಜೆಗಳು ಸುರಕ್ಷಿತವಾಗಿ ಮರಳುವುದನ್ನು ಖಚಿತಪಡಿಸಿಕೊಳ್ಳಲು ಸರ್ಕಾರವು ಎಲ್ಲಾ ಪ್ರಯತ್ನಗಳನ್ನು ಮಾಡುತ್ತಿದೆ. ಭಾರತೀಯರನ್ನು ಹೊತ್ತ ಮತ್ತೊಂದು ವಿಮಾನ ಇಂದು ಭಾರತಕ್ಕೆ ಬರುವ ನಿರೀಕ್ಷೆಯಿದೆ. ಇದಕ್ಕೂ ಮೊದಲು, ಉತ್ತರ ಇರಾನ್‌ನಿಂದ ಸ್ಥಳಾಂತರಿಸಲಾದ ೧೧೦ ಭಾರತೀಯ ವಿದ್ಯಾರ್ಥಿಗಳು ನವದೆಹಲಿಗೆ ಆಗಮಿಸಿದರು. ಈ ಕುರಿತು ನವದೆಹಲಿಯಲ್ಲಿ ಮಾಧ್ಯಮಗಳೊಂದಿಗೆ ಮಾತನಾಡಿದ ವಿದೇಶಾಂಗ ವ್ಯವಹಾರಗಳ ರಾಜ್ಯ ಸಚಿವ ಕೀರ್ತಿ ವರ್ಧನ್ ಸಿಂಗ್, ಸರ್ಕಾರವು ಇರಾನ್‌ನಲ್ಲಿರುವ ಭಾರತೀಯ ನಾಗರಿಕರಿಂದ ಸ್ಥಳಾಂತರಿಸುವಂತೆ ೩೫೦ ಕ್ಕೂ ಹೆಚ್ಚು ವಿನಂತಿಗಳನ್ನು ಸ್ವೀಕರಿಸಿದೆ ಎಂದು ಹೇಳಿದರು.

ಧ್ವನಿ: ಕೀರ್ತಿವರ್ಧನ್ ಸಿಂಗ್ (೨೫ ಸೆಕೆಂಡ್ಸ್)

ಏತನ್ಮಧ್ಯೆ, ಇಸ್ರೇಲ್ ಪಡೆಗಳು ಇರಾನ್‌ನಾದ್ಯಂತ ಮೂರು ಹಂತಗಳಲ್ಲಿ ವಾಯುದಾಳಿಗಳನ್ನು ನಡೆಸುತ್ತಿವೆ ಮತ್ತು ನಿರಂತರ ಬಾಂಬ್ ದಾಳಿಯಿಂದ ಹೆಚ್ಚುತ್ತಿರುವ ಸಾವು-ನೋವುಗಳನ್ನು ಇರಾನ್ ಅಧಿಕಾರಿಗಳು ವರದಿ ಮಾಡಿದ್ದಾರೆ. ಈ ಮೂಲಕ ಇಸ್ರೇಲ್-ಇರಾನ್ ಸಂಘರ್ಷ ತೀವ್ರಗೊಂಡಿದೆ. ಇರಾನ್‌ನ ರಾಷ್ಟ್ರೀಯ ಪೊಲೀಸ್ ಪ್ರಧಾನ ಕಚೇರಿಯನ್ನು ಗುರಿಯಾಗಿಸಿಕೊಂಡು ಇಸ್ರೇಲ್ ದಾಳಿ ನಡೆಸಿದೆ. ದಾಳಿಯಲ್ಲಿ ಅನೇಕ ಜನರು ಗಾಯಗೊಂಡಿದ್ದಾರೆ. ಮತ್ತೊಂದೆಡೆ, ಇರಾನ್‌ನ ಸಾರ್ವಜನಿಕ ಭದ್ರತೆಯ ಪ್ರಧಾನ ಕಚೇರಿಯನ್ನು ಇಸ್ರೇಲ್ ನಾಶಪಡಿಸಿದೆ.

><><><><><><><

ಇಸ್ರೇಲ್-ಇರಾನ್ ಸಂಘರ್ಷ ತಗ್ಗಿಸಲು ಮತ್ತು ಕದನ ವಿರಾಮಕ್ಕೆ ವಿಶ್ವಸಂಸ್ಥೆಯ ಪ್ರಧಾನ ಕಾರ್ಯದರ್ಶಿ ಆಂಟೋನಿಯೊ ಗುಟೆರೆಸ್ ಕರೆ ನೀಡಿದ್ದಾರೆ. ಸಂಘರ್ಷವನ್ನು ಮತ್ತಷ್ಟು ಉಲ್ಬಣಗೊಳಿಸುವುದನ್ನು ತಪ್ಪಿಸಲು ಅವರು ಮನವಿ ಮಾಡಿದರು. ಯಾವುದೇ ಹೆಚ್ಚುವರಿ ಮಿಲಿಟರಿ ಹಸ್ತಕ್ಷೇಪಗಳು ಇಡೀ ಪ್ರದೇಶಕ್ಕೆ ಹಾಗೂ ಅಂತಾರಾಷ್ಟ್ರೀಯ ಶಾಂತಿ ಮತ್ತು ಭದ್ರತೆಗೆ ಅಗಾದ ಪರಿಣಾಮಗಳನ್ನು ಬೀರಬಹುದು ಎಂದು ಅವರು ಹೇಳಿದರು.

ನಾಗರಿಕರ ಸಾವು-ನೋವುಗಳನ್ನು ಖಂಡಿಸಿದ ಆಂಟೋನಿಯೊ ಗುಟೆರೆಸ್, ರಾಜತಾಂತ್ರಿಕತೆಯು ಉತ್ತಮ ಮತ್ತು ಮುಂದಿನ ಏಕೈಕ ಮಾರ್ಗವಾಗಿದೆ ಎಂದು ಒತ್ತಿ ಹೇಳಿದರು.

><><><><><><><

ರಕ್ಷಣಾ ಕಾರ್ಯದರ್ಶಿ ರಾಜೇಶ್ ಕುಮಾರ್ ಸಿಂಗ್ ಅವರು ಇಸ್ರೇಲ್ ರಕ್ಷಣಾ ಸಚಿವಾಲಯದ ಮಹಾನಿರ್ದೇಶಕ ಮೇಜರ್ ಜನರಲ್ ಅಮೀರ್ ಬರಮ್ ಅವರೊಂದಿಗೆ ದೂರವಾಣಿ ಸಂಭಾಷಣೆ ನಡೆಸಿದರು. ಇಬ್ಬರು ನಾಯಕರು ಪಶ್ಚಿಮ ಏಷ್ಯಾದಲ್ಲಿನ ಪ್ರಸ್ತುತ ಪರಿಸ್ಥಿತಿಯ ಕುರಿತು ಚರ್ಚಿಸಿದ್ದಾರೆ ಎಂದು ರಕ್ಷಣಾ ಸಚಿವಾಲಯ ತಿಳಿಸಿದೆ. ಇಸ್ರೇಲ್ ಮತ್ತು ಇರಾನ್ ನಡುವಿನ ಹೆಚ್ಚುತ್ತಿರುವ ಉದ್ವಿಗ್ನತೆಯ ಮಧ್ಯೆ ಈ ಸಂಭಾಷಣೆ ನಡೆದಿದೆ.

><><><><><><><><

ನಾಲ್ಕು ರಾಜ್ಯಗಳ ಐದು ವಿಧಾನಸಭಾ ಸ್ಥಾನಗಳಿಗೆ ಇಂದು ಉಪಚುನಾವಣೆ ನಡೆಯುತ್ತಿದ್ದು, ಮತದಾನ ಪ್ರಗತಿಯಲ್ಲಿದೆ. ಗುಜರಾತ್‌ನಲ್ಲಿ ಎರಡು, ಕೇರಳ, ಪಶ್ಚಿಮ ಬಂಗಾಳ ಮತ್ತು ಪಂಜಾಬ್‌ನಲ್ಲಿ ತಲಾ ಒಂದು ವಿಧಾನಸಭಾ ಕ್ಷೇತ್ರಕ್ಕೆ ಉಪಚುನಾವಣೆ ನಡೆಯುತ್ತಿದೆ. ಮತ ಎಣಿಕೆ ಕಾರ್ಯ ಸೋಮವಾರ ನಡೆಯಲಿದೆ. ಗುಜರಾತ್‌ನಲ್ಲಿ ಕಾಡಿ ಹಾಗೂ ವಿಸಾವದರ್ ಕ್ಷೇತ್ರಗಳಿಗೆ, ಕೇರಳದಲ್ಲಿ ನೀಲಂಬೂರ್ ಕ್ಷೇತ್ರಕ್ಕೆ, ಪಂಜಾಬ್‌ನ ಲುಧಿಯಾನ ಕ್ಷೇತ್ರಕ್ಕೆ ಹಾಗೂ ಪಶ್ಚಿಮ ಬಂಗಾಳದ ಕಾಳಿಗಂಜ್ ವಿಧಾನಸಭಾ ಕ್ಷೇತ್ರಕ್ಕೆ ಉಪಚುನಾವಣೆ ನಡೆಯುತ್ತಿದೆ.

><><><><><><><><

ಕ್ಯೂಎಸ್ ಜಾಗತಿಕ ವಿಶ್ವವಿದ್ಯಾಲಯ ರ‍್ಯಾಂಕಿಂಗ್ ೨೦೨೬ ಬಿಡುಗಡೆಯಾಗಿದ್ದು, ದಾಖಲೆಯ ೫೪ ಭಾರತೀಯ ಸಂಸ್ಥೆಗಳು ಸ್ಥಾನ ಪಡೆದಿವೆ. ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ, ದೆಹಲಿ ದೇಶದ ಅಗ್ರ ಶ್ರೇಯಾಂಕಿತ ಸಂಸ್ಥೆಯಾಗಿ ಹೊರಹೊಮ್ಮಿದೆ. ಐಐಟಿ ದೆಹಲಿಯ ಜಾಗತಿಕ ರ‍್ಯಾಂಕಿಂಗ್, ಈ ಹಿಂದಿನ ೧೫೦ನೇ ಸ್ಥಾನದಿಂದ ಪ್ರಸ್ತುತ ೧೨೩ನೇ ಸ್ಥಾನಕ್ಕೆ ಗಮನಾರ್ಹ ಏರಿಕೆ ಕಂಡಿದೆ. ಭಾರತದ ಉನ್ನತ ಶಿಕ್ಷಣ ಸಂಸ್ಥೆಗಳು ಕ್ಯೂಎಸ್ ಜಾಗತಿಕ ವಿಶ್ವವಿದ್ಯಾಲಯ ರ‍್ಯಾಂಕಿಂಗ್‌ನಲ್ಲಿ ಅಭೂತಪೂರ್ವ ಏರಿಕೆ ಕಂಡಿವೆ. ವಿಶ್ವ ವೇದಿಕೆಯಲ್ಲಿ ಹಿಂದೆಂದಿಗಿಂತಲೂ ಹೆಚ್ಚಿನ ಸಂಸ್ಥೆಗಳು ತಮ್ಮ ಸ್ಥಾನವನ್ನು ಗಳಿಸಿವೆ ಎಂದು ಶಿಕ್ಷಣ ಸಚಿವಾಲಯ ತಿಳಿಸಿದೆ. ಕ್ಯೂಎಸ್ ಜಾಗತಿಕ ವಿಶ್ವವಿದ್ಯಾಲಯ ರ‍್ಯಾಂಕಿಂಗ್‌ನಲ್ಲಿ ಐಐಟಿ ಬಾಂಬೆಗೆ ೧೨೯ನೇ ಸ್ಥಾನ, ಐಐಟಿ ಮದ್ರಾಸ್‌ಗೆ ೧೮೦ನೇ ಸ್ಥಾನ, ಐಐಟಿ ಖರಗ್‌ಪುರ ೨೧೫ನೇ ಸ್ಥಾನ, ಐಐಎಸ್‌ಸಿ ಬೆಂಗಳೂರು ೨೧೯ನೇ ಸ್ಥಾನ ಮತ್ತು ದೆಹಲಿ ವಿಶ್ವವಿದ್ಯಾಲಯ ೩೨೮ನೇ ಸ್ಥಾನ ಪಡೆದಿರುವ ಪ್ರಮುಖ ಶಿಕ್ಷಣ ಸಂಸ್ಥೆಗಳಾಗಿವೆ.

><><><><><><><><

ಮಹಾರಾಷ್ಟ್ರದ ಪುಣೆಯ ಜೆಜುರಿ-ಮೋರ್ಗಾಂವ್ ರಸ್ತೆಯಲ್ಲಿ ಸಂಭವಿಸಿದ ರಸ್ತೆ ಅಪಘಾತದಲ್ಲಿ ಮೃತಪಟ್ಟವರ ಕುಟುಂಬಗಳಿಗೆ ಪ್ರಧಾನಿ ನರೇಂದ್ರ ಮೋದಿ ಸಂತಾಪ ಸೂಚಿಸಿದ್ದಾರೆ. ಮೃತರ ಸಂಬಂಧಿಕರಿಗೆ ಪ್ರಧಾನ ಮಂತ್ರಿಗಳ ರಾಷ್ಟ್ರೀಯ ಪರಿಹಾರ ನಿಧಿಯಿಂದ ಎರಡು ಲಕ್ಷ ರೂಪಾಯಿಗಳ ಪರಿಹಾರ ಹಾಗೂ ಗಾಯಾಳುಗಳಿಗೆ ತಲಾ ೫೦ ಸಾವಿರ ರೂಪಾಯಿಗಳನ್ನು ಪರಿಹಾರವನ್ನು ಘೋಷಿಸಿದ್ದಾರೆ. ಗಾಯಗೊಂಡವರು ಶೀಘ್ರವಾಗಿ ಚೇತರಿಸಿಕೊಳ್ಳಲಿ ಎಂದು ಪ್ರಧಾನಿ ಮೋದಿ ಹಾರೈಸಿದ್ದಾರೆ. ನಿನ್ನೆ ಸಂಜೆ ಪುಣೆ ಜಿಲ್ಲೆಯಲ್ಲಿ ನಡೆದ ರಸ್ತೆ ಅಪಘಾತದಲ್ಲಿ ಎಂಟು ಜನರು

ಸಾವನ್ನಪ್ಪಿದ್ದು, ಐದು ಜನರು ಗಂಭೀರವಾಗಿ ಗಾಯಗೊಂಡಿದ್ದಾರೆ. ಜೆಜುರಿ-ಮೋರ್ಗಾಂವ್ ರಸ್ತೆಯಲ್ಲಿ ವೇಗವಾಗಿ ಬಂದ ಪ್ರಯಾಣಿಕ ಕಾರು ನಿಂತಿದ್ದ ಟೆಂಪೋಗೆ ಡಿಕ್ಕಿ ಹೊಡೆದು ಈ ಅಪಘಾತ ಸಂಭವಿಸಿದೆ.

><><><><><><><

ಅಹಮದಾಬಾದ್ ಏರ್ ಇಂಡಿಯಾ ವಿಮಾನ ಅಪಘಾತದಲ್ಲಿ ಮೃತಪಟ್ಟವರ ಸಂಖ್ಯೆ ೨೧೦ಕ್ಕೆ ಏರಿಕೆಯಾಗಿದೆ. ಡಿಎನ್‌ಎ ಹೊಂದಾಣಿಕೆ ಮೂಲಕ ಇದುವರೆಗೆ ೧೮೭ ಮೃತದೇಹಗಳನ್ನು ಅವರ ಕುಟುಂಬಗಳಿಗೆ ಹಸ್ತಾಂತರಿಸಲಾಗಿದೆ ಎಂದು ಗುಜರಾತ್ ಆರೋಗ್ಯ ಸಚಿವ ರಿಷಿಕೇಶ್ ಪಟೇಲ್ ತಿಳಿಸಿದ್ದಾರೆ.

><><><><><><><

ಹೈದರಾಬಾದ್‌ನಿಂದ ತಿರುಪತಿಗೆ ಹೊರಟಿದ್ದ ಸ್ಪೈಸ್‌ಜೆಟ್‌ನ ಎಸ್ ಜಿ ೨೬೯೬ ನಾಗರಿಕ ವಿಮಾನ ತಾಂತ್ರಿಕ ದೋಷದ ಕಾರಣದಿಂದ, ಹಾರಾಟ ನಡೆಸಿದ ಹತ್ತು ನಿಮಿಷಕ್ಕೆ ವಾಪಸ್ ಹೈದರಾಬಾದ್ ವಿಮಾನ ನಿಲ್ದಾಣಕ್ಕೆ ಹಿಂದಿರುಗಿದೆ. ಬೆಳಗ್ಗ ೬.೧೦ಕ್ಕೆ ಶಂಶಾಬಾದ್‌ನ ರಾಜೀವ್ ಗಾಂಧಿ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದಿಂದ ಹೊರಟಿದ್ದ ವಿಮಾನದಲ್ಲಿ ೮೦ ಪ್ರಯಾಣಿಕರಿದ್ದರು. ತಾಂತ್ರಿಕ ತೊಂದರೆಯನ್ನು ಪೈಲಟ್ ಗಮನಿಸಿ, ತಕ್ಷಣವೇ ಏರ್ ಟ್ರಾಫಿಕ್ ಕಂಟ್ರೋಲ್ ಸಂಪರ್ಕಿಸಿ, ವಿಮಾನ ನಿಲ್ದಾಣಕ್ಕೆ ಮರಳಲು ಅನುಮತಿ ಪಡೆದರು. ವಿಮಾನ ಸುರಕ್ಷಿತವಾಗಿ ಹೈದರಾಬಾದ್‌ಗೆ ಹಿಂದಿರುಗಿದ್ದು, ಪ್ರಯಾಣಿಕರಿಗಾಗಿ ಪರ್ಯಾಯ ವ್ಯವಸ್ಥೆ ಮಾಡಲಾಗುತ್ತಿದೆ.

><><><><><><><

ಮೂರು ಸಾವಿರ ಹುತಾತ್ಮ ಉಕ್ರೇನಿಯನ್ ಸೈನಿಕರ ಮೃತದೇಹಗಳನ್ನು ಹಸ್ತಾಂತರಿಸಲು ರಷ್ಯಾ ಸಿದ್ಧವಾಗಿದೆ ಎಂದು ರಷ್ಯಾ ಅಧ್ಯಕ್ಷ ವ್ಲಾಡಿಮಿರ್ ಪುಟಿನ್ ಹೇಳಿದ್ದಾರೆ. ಸೇಂಟ್ ಪೀಟರ್ಸ್‌ಬರ್ಗ್‌ನಲ್ಲಿ ಪ್ರಮುಖ ಅಂತಾರಾಷ್ಟ್ರೀಯ ಸುದ್ದಿ ಸಂಸ್ಥೆಗಳ ಮುಖ್ಯಸ್ಥರೊಂದಿಗಿನ ಸಭೆಯಲ್ಲಿ ಪುಟಿನ್ ಅವರು, ೬ ಸಾವಿರ ಹುತಾತ್ಮ ಉಕ್ರೇನಿಯನ್ ಸೈನಿಕರ ಮೃತದೇಹಗಳನ್ನು ರಷ್ಯಾ ಹಿಂದಿರುಗಿಸಿದೆ ಮತ್ತು ಸುಮಾರು ಮೂರು ಸಾವಿರ ಉಕ್ರೇನಿಯನ್ ಸೈನಿಕರ ಮೃತದೇಹಗಳನ್ನು ಹಸ್ತಾಂತರಿಸಲು ಸಿದ್ಧವಾಗಿದೆ ಎಂದುಹೇಳಿದರು.

><><><><><><><

ಖ್ಯಾತ ಪರಿಸರವಾದಿ, ವನ್ಯಜೀವಿ ತಜ್ಞ ಮತ್ತು ಪದ್ಮಶ್ರೀ ಪ್ರಶಸ್ತಿ ಪುರಸ್ಕೃತ, ಅರಣ್ಯ ಋಷಿ' ಎಂದೇ ಪ್ರೀತಿಯಿಂದ ಕರೆಯಲ್ಪಡುವ ಮಾರುತಿ ಚಿತಂಪಳ್ಳಿ ಅವರು ಮಹಾರಾಷ್ಟ್ರದ ಸೋಲಾಪುರದಲ್ಲಿ ವಯೋಸಹಜ ಕಾಯಿಲೆಗಳಿಂದ ಇಂದು ನಿಧನರಾದರು.

><><><><><><><

ಮಲೇಷ್ಯಾದಲ್ಲಿ ನಡೆದ ಏಷ್ಯನ್ ಸ್ಕ್ವಾಷ್ ಚಾಂಪಿಯನ್‌ಶಿಪ್‌ನಲ್ಲಿ, ಭಾರತದ ವೆಲವನ್ ಸೆಂಥಿಲ್‌ಕುಮಾರ್, ಜಪಾನ್‌ನ ಟೊಮೊಟಕ ಎಂಡೊ ವಿರುದ್ಧ ೩-೦ ಅಂತರದಿಂದ ಜಯಗಳಿಸಿ, ಕ್ವಾರ್ಟರ್ ಫೈನಲ್ ಪ್ರವೇಶಿಸಿದ್ದಾರೆ.

><><><><><><><><